# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 29.05.2019**

## ಕೆಪಿಟಿಸಿಎಲ್, ಬೆಸ್ಕಾಂ ಹಾಗೂ ಬಿಬಿಎಂಪಿ ಅಧಿಕಾರಿಗಳೊಂದಿಗೆ ಮಹತ್ವದ ಸಭೆ: ಪೂಜ್ಯ ಮಹಾಪೌರರು

ಪೂಜ್ಯ ಮಹಾಪೌರರು ರವರ ಅಧ್ಯಕ್ಷತೆಯ ಸದರಿ ಸಭೆಯಲ್ಲಿ ಆಡಳಿತ/ವಿರೋಧ ಪಕ್ಷದ ನಾಯಕರು ಸೇರಿದಂತೆ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀಮತಿ ಶೀಖಾ, ಪಾಲಿಕೆಯ ವಿಶೇಷ ಆಯುಕ್ತರು(ಯೋಜನೆ), ಕೆ.ಪಿ.ಟಿ.ಸಿ.ಎಲ್ ನ ಮುಖ್ಯ ಅಭಿಯಂತರರು ಭಾಗವಹಿಸಿ ಸುದೀರ್ಘ ಚರ್ಚೆ ನಡೆಸಿದರು.

ನಗರದಲ್ಲಿ ಇತ್ತೀಚೆಗೆ ವಿದ್ಯುತ್ ಅವಘಾಡದಿಂದ ಅನೇಕ ಸಾವು/ನೋವುಗಳು ಸಂಭವಿಸುತ್ತಿದ್ದು, ಅದನ್ನು ತಡೆಗಟ್ಟಲು ತೆಗೆದು ಬೇಕಾದ ಕ್ರಮಗಳ ಬಗ್ಗೆ ಚರ್ಚಿಸಿ, ವಿಶೇಷ ಆಯುಕ್ತರು (ಯೋಜನೆ) ಹಾಗೂ ಬೆಸ್ಕಾಂ ವತಿಯಿಂದ, ವ್ಯವಸ್ಥಾಪಕ ನಿರ್ದೇಶಕರ ಮೇಲುಸ್ತುವಾರಿಯಲ್ಲಿ 10 ದಿನದೊಳಗೆ ಬಿಬಿಎಂಪಿ, ಬೆಸ್ಕಾಂ, ಕೆಪಿಟಿಸಿಎಲ್ ಅಧಿಕಾರಿಗಳು ಹೈಟೆನ್ಷನ್ ಲೈನ್ ಕೆಳಗೆ ಇರುವ ಅಧಿಕೃತವಾಗಿ ಅಥವಾ ಅನಧಿಕೃತವಾಗಿ ನಿರ್ಮಿಸಿಕೊಂಡಿರುವ ವಾಸದ ಮನೆಗಳು ಹಾಗೂ ಇತರೆ ಕಟ್ಟಡಗಳನ್ನು ಜಂಟಿಯಾಗಿ ಸರ್ವೆ ಕಾರ್ಯ ಮಾಡಿ ವರದಿ ನೀಡಲು ಸೂಚಿಸಿರುತ್ತಾರೆ. ಈ ರೀತಿ ಸರ್ವೆ ಕಾರ್ಯ ಮಾಡುವ ಸಂದರ್ಭದಲ್ಲಿ ಶಾಲಾ ಕಾಲೇಜುಗಳು, ಉದ್ಯಾನವನಗಳು, ದೇವಸ್ಥಾನಗಳು, 'ಎ/ಬಿ' ಖಾತಾ ಅನಧಿಕೃತ ಮನೆಗಳು ವಾಣಿಜ್ಯ ಕಟ್ಟಡಗಳನ್ನು ಈ ರೀತಿ ವರ್ಗೀಕರಣ ಮಾಡಿ ಸರ್ವೆ ಮಾಡುವಂತೆ ಸೂಚಿಸಲಾಯಿತು.

ಈ ರೀತಿ ಸರ್ವೆ ಕಾರ್ಯ ಮಾಡುವ ಸಂದರ್ಭದಲ್ಲಿ ಸ್ಥಳೀಯ ಸಾರ್ವಜನಿಕರಿಗೆ/ನಿವಾಸಿಗಳಿಗೆ ಮುನ್ನೆಚ್ಚರಿಕೆ ಮತ್ತು ಜಾಗೃತಿ ಮೂಡಿಸುವುದು ಹಾಗೂ ನಿವಾಸಿಗಳು ಯಾವುದೇ ಕಾರಣಕ್ಕೂ ಮನೆ ಮೇಲೆ ಹೋಗಲು ಅವಕಾಶ ಮಾಡದೆ ನಿರ್ಭಂದ ಹೇರುವುದು, ಯಾವುದೇ ಅಪಾಯಕಾರಿ ಅಡಚಣೆಗಳಿದ್ದಲ್ಲಿ ಕೂಡಲೇ ತೆರವುಗೊಳಿಸುವುದು.

ಹೈಟೆನ್ಷನ್ ಲೈನ್ ಕೆಳಗೆ ಯಾವುದೇ ರೀತಿಯ ನಿರ್ಮಾಣ ಕಾರ್ಯ ನಡೆಯುತ್ತಿದ್ದಲ್ಲಿ ತಕ್ಷಣ ತಡೆಗಟ್ಟಲು ಪಾಲಿಕೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಲಾಯಿತು. ಒಂದು ವೇಳೆ ನಕ್ಷೆ ಮಂಜೂರಾತಿ ನೀಡಿದ್ದಲ್ಲಿ ಹಿಂದಕ್ಕೆ ಪಡೆಯುವುದು. ಈ ರೀತಿಯ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಮಹಾಪೌರರು ಸೂಚಿಸಿದ್ದು, ಅದರಂತೆ ತೆಗೆದುಕೊಂಡ ಕ್ರಮದ ಬಗ್ಗೆ ಅನುಸರಣಾ ವರದಿ ಸಲ್ಲಿಸುವಂತೆ ಸೂಚಿಸಿಲಾಯಿತು. ಈ ಸಂದರ್ಭದಲ್ಲಿ ಬೆಸ್ಕಾಂ, ಕೆ.ಪಿ.ಟಿ.ಸಿ.ಎಲ್ ಸಂಸ್ಥೆಯ ವತಿಯಿಂದ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

**ಸಾರ್ವಜನಿಕ ಸಂಪರ್ಕಾಧಿಕಾರಿ**




ಗಂಗಾಂಬಿಕೆ

